2. ಹಾಸನ ತಾಲ್ಲೂಕಿನ ಬರ ಪೀಡಿತ ಪ್ರದೇಶಗಳಿಗೆ ಹೇಮಾವತಿ ನದಿಯಿಂದ ನೀರಿನ ಸೌಲಭ್ಯವನ್ನು ಒದಗಿಸುವುದು.

ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) : ಸನ್ಮಾನ್ಯ ಉಪಾಧ್ಯಕ್ಷಣೆಯವರೇ, ಹಾಸನ ತಾಲ್ಲೂಕಿನ ಬರ ಪೀಡಿತ ಪ್ರದೇಶಗಳಿಗೆ ಹೇಮಾವತಿ ನದಿಯಿಂದ ನೀರಾವರಿ ಸೌಲಭ್ಯವನ್ನು ಒದಗಿಸುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ : (ಶಿಕ್ಷಣ ಮತ್ತು ಸಂಸದೀಯ ಸಚಿವರು) ಸನ್ಮಾನ್ಯ ಉಪಾಧ್ಯಕ್ಷಣೆಯವರೆ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ನಾನು ಈ ಹೇಳಿಕೆಯನ್ನು ಕೊಡುವುದಕ್ಕೆ ತಮ್ಮ ಅನುಮತಿಯನ್ನು ಕೋರುತ್ತೇನೆ.

ಹಾಸನ ಜಿಲ್ಲೆಯ ಹಾಸನ ತಾಲ್ಲೂಕಿನ ಬರಪೀಡಿತ ಪ್ರದೇಶಗಳಿಗೆ ಭಾರಿ ಮತ್ತು ಮಧ್ಯಮ ನೀರಾವರಿಡಿಯಲ್ಲಿ ಹೇಮಾವತಿ ನದಿಯಿಂದ ನೀರಾವರಿ ಸೌಲಭ್ಯವನ್ನು ಒದಗಿಸುವುದಕ್ಕೆ ಈ ಕೆಳಕಂಡ ಯೋಜನೆಗಳು ನಿರ್ಮಾಣ ಹಂತದಲ್ಲಿವೆ.

1. ಹೇಮಾವತಿ ಜಲಾಶಯ ಯೋಜನೆ

ಈ ಯೋಜನೆಯ ಪರಿಷ್ಕೃತ ಅಂದಾಜು ರೂ. 588 ಕೋಟಿ. ಹಾಸನ ತಾಲ್ಲೂಕಿನಲ್ಲಿ 1150 ಹೆಕ್ಟೇರ್ (2842 ಎಕರೆ) ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗುತ್ತದೆ.

2. ಯಗಚಿಯೋಜನೆ

ಈ ಯೋಜನೆಯು ಹೇಮಾವತಿ ಉಪನದಿಯಾದ ಯಗಚಿ ನದಿಯ ಮೇಲೆ ನಿರ್ಮಿಸಲಾಗುತ್ತಿದೆ. ಈ ಯೋಜನೆಯ ಪರಿಷ್ಕೃತ ಅಂದಾಜು ರೂ 35.38ಕೋಟಿ. ಈ ಯೋಜನೆಯಿಂದ ಹಾಸನ ತಾಲ್ಲೂಕಿನಲ್ಲಿ 36190ಎಕರೆ ಪ್ರದೇಶಕ್ಕೆ ನೀರಾವರಿಯಾಗುತ್ತದೆ. ಈ ಯೋಜನೆಗಳ ಕೆಲಸಗಳು ವಿವಿಧ ಹಂತದಲ್ಲಿವೆ.

ಶ್ರೀ ಕೆ.ಹೆಚ್. ಹನುಮೇಗೌಡ: (ಹಾಸನ) ಸನ್ಮಾನ್ಯ ಉಪಾಧ್ಯಕ್ಷಣೆಯವರೇ, ನಾನು ಕೇಳಿರುವುದು. ಹೊಳೆನರಸೀಪುರ ತಾಲ್ಲೂಕಿನಲ್ಲಿ ಕಾಮಸಮುದ್ರ ಎನ್ನುವ ಊರಿನ ಹತ್ತಿರ ಸುಮಾರು 8 ಕೋಟಿ ರೂಪಾಯಿ ಅಂದಾಜು ವೆಚ್ಚದಲ್ಲಿ ಏತ ನೀರಾವರಿ ಯೋಜನೆಯನ್ನು ಮಾಡುವುದಕ್ಕೆ ಕಾರ್ಯಗತ ಮಾಡುವ ಬಗ್ಗೆ ನಾನು ಕೇಳಿರುವುದು ಈಗ ಯಗಚಿ ನದಿಯಿಂದ ನೀರು ತಂದು 35 ಸಾವಿರ ಎಕರೆ ನೀರಾವರಿ ಆಗುತ್ತದೆಂದು ಹೇಳಿದ್ದಾರೆ. ಆದರೆ ಆ ನದಿಯಲ್ಲಿ ನೀರೂ ಇಲ್ಲ. ಇದರ ಮೇಲಗಡೆ ಬರುವ ಬೇಲೂರಿನವರು ನಮ್ಮ ತಾಲ್ಲೂಕಿನಲ್ಲಿ ಅಣೆಕಟ್ಟುತ್ತಿದ್ದೀರಿ. ನಮ್ಮದೂ ಬರಗಾಲ ಪ್ರದೇಶ, ನಮಗೆ ನೀರು ಕೊಟ್ಟು ನಂತರ ಕೆಳಕ್ಕೆ ತೆಗೆದುಕೊಂಡು ಹೋಗಿ ಎಂದು ಅವರು ಗಲಾಟೆ ಮಾಡುತ್ತಿದ್ದಾರೆ. ಬಹುಶಃ ಅಲ್ಲಗೇ ಸಾಕಾಗುತ್ತದೋ ಅಥವಾ ಅದು ಹಾಸನ ತಾಲ್ಲೂಕಿಗೆ ಬರುತ್ತದೋ ಎಂಬುದು ಮುಂದಿನ ಪ್ರಶ್ನೆ. ನಾನು ಕೇಳಿತ್ತಿರುವುದು, ಸರ್ಕಾರದ ಹಣದಿಂದ ಒಂದು ಏತ ನೀರಾವರಿ ಯೋಜನೆಯನ್ನು ಹೊಳೆನರಸೀಪುರ ತಾಲ್ಲೂಕು ರಾಮಸಮುದ್ರದ ಹತ್ತಿರ ಮಾಡುತ್ತಿದ್ದಾರೆ. ರಾಮಸಮುದ್ರದಲ್ಲಿ ಮಾಡುತ್ತಿರತಕ್ಕಂಥ ಏತ ನೀರಾವರಿ, ಹಾಸನ ತಾಲ್ಲೂಕಿನಿಂದ 14 ಕಿಲೋಮೀಟರ್ ದೂರದಲ್ಲಿದೆ. ಅದು ಹಾಸನ ತಾಲ್ಲೂಕಿಗೆ ಬಂದ ತಕ್ಷಣ ಈ ಕ್ಷಾಟ್ಟೂರ್ನು ಮುಂದುವರಿಸಬಹುದು. ಕಾಲುವೆ ತೆಗೆದು ನೀರಾವರಿ ಕೊಡುವುದಕ್ಕೆ ಅವಕಾಶ ಇದೆ. ಆದರೆ ಅಲ್ಲಿಗೆ ನಿಲ್ಲಿಸಿಬಿಟ್ರು. ನಾನು ಮಾನ್ಯ ಸಚಿವರನ್ನು ಕೇಳುತ್ತೇನೆ. ಅದನ್ನು ನಿಲ್ಲಿಸುವುದಕ್ಕೆ ಕಾರಣ ಏನು? ಇದಕ್ಕೆ ಹಣ ಜಾಸ್ತಿ ಖರ್ಚಾಗುವುದರಿಂದ ನೀರು ಎಲ್ಲಿ ಹರಿಯುತ್ತದೋ ಆ ಕಡೆ ಬಿಟ್ಟು ಬಿಡುತ್ತೇವೆಂದು ಅವರು ಹೇಳುತ್ತಾರೆ. ಹಾಸನ ತ್ಲಾಲ್ಲೂಕಿನಲ್ಲಿ ನೀರು ಹರಿದು ಹೋಗುವುದಕ್ಕೆ ಅವಕಾಶ ಇದ್ದೂ, ಸಹ ಹೊಳೆನರಸೀಪುರ

ತಾಲ್ಲೂಕಿನಿಂದ ಹಾಸನ ತಾಲ್ಲೂಕಿಗೆ ಬಂದ ತಕ್ಷಣ ಕೆಲಸ ನಿಲ್ಲಿಸಿದ್ದಾರೆ. ಅಂದರೆ ಇದಕ್ಕೆ ಹೊಳೆನರಸೀಪುರ ತಾಲ್ಲೂಕಿನವರು ಮಾತ್ರ ದುಡ್ಡು ಕೊಟ್ಟಿದ್ದಾರೆಯೇ? ಅಥವಾ ಈ ದೇಶದ ಜನ ಕೊಟ್ಟಿರತಕ್ಕಂಥ ಹಣದಲ್ಲಿ ಈ ಏತನೀರಾವರಿ ಯೋಜನೆ ಮಾಡುತ್ತಿದ್ದೀರೋ? ಇದು ಒಂದನೇ ಪ್ರಶ್ನೆ. ಆಮೇಲೆ ಹಾಸನ ತಾಲ್ಲೂಕಿಗೆ ಏನೂ ಕಾಂಟೂರ್ ಮುಂದುವರಿ ಸುತ್ತಾರೋ ಅಲ್ಲಿ ವಿಪರೀತ ಬರಗಾಲ ಪ್ರದೇಶ ಇದೆ ಅಲ್ಲಿ 8-10 ವರ್ಷಗಳಿಂದ ಮಳೆಯಾಗದೆ ಆ ಭಾಗದ ಜನ ಊರು ಬಿಟ್ಟು ಬೇರೆ ಕಡೆ ಹೋಗುತ್ತಿದ್ದಾರೆ. ಅಂಥಾ ಪರಿಸ್ಥಿತಿ ಇದೆ. ಇದು ಎರಡು ಭಾಗದ ನಾಲೆ ವಿಚಾರ. ಬಲ ಭಾಗದ ನಾಲೆ 11 ಕಿಲೋಮೀಟರ್ ಹೋದ ಮೇಲೆ ಪುನಃ ಹಾಸನ ತಾಲ್ಲೂಕು ಹತ್ತಿರ ಬರುತ್ತದೆ. ಅಲ್ಲಿ ಹಾಸನ ತಾಲ್ಲೂಕು ಬಂದುಬಿಡುತ್ತದೆಂದು ಮತ್ತೆ ಪುನಃ 59 ಕಿಲೋಮೀಟರ್ ಬೆಟ್ಟವನ್ನು ಸುತ್ತಿಕೊಂಡು ವಾಪಸ್ ತೆಗೆದುಕೊಂಡು ಹೋಗಿದ್ದಾರೆ. ಇದರಿಂದ 3 ಸಾವಿರ ಎಕರೆಗೆ ನೀರಾವರಿಯಾಗುತ್ತದೆಂದು ಸುಮಾರು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಹಾಸನ ತಾಲ್ಲೂಕಿನ 11 ಕಿಲೋಮೀಟರ್‌ನಲ್ಲಿ ಇನ್ನೊಂದು ಕಾಂಟೂರ್ ಬರುತ್ತದೆ. ಅದರ ಬಗ್ಗೆ ನಾನು ಗಲಾಟೆ ಮಾಡಿದ್ದಕ್ಕೆ ಐದಾರು ಇಂಜಿನೀಯರ್‌ಗಳು ಹೋಗಿ ಟೇಪ್ ಹಿಡಿದು ಅಡ್ಡಾಡಿ ವಾಪಸ್ ಬಂದು ಬಿಟ್ಟಿದ್ದಾರೆ. ಇವರನ್ನು ಯಾರು ಹೆದರಿಸಿದ್ದರೋ ಏನೋ ಗೊತ್ತಿಲ್ಲ.

ನಾನು ಮುಖ್ಯಮಂತ್ರಿಗಳಲ್ಲಿ ಕೇಳುವ ಪ್ರಶ್ನೆ ಏನೆಂದರೆ ಏಕೆ ಅಲ್ಲಿ ಕೂಡ 4 ದಿವಸ ಕಾಲುವೆ ತೆಗೆಯುವ ಹಾಗೆ ನಟನೆ ಮಾಡಿ ವಾಪಸ್ ಬಂದರು. ಇದಕ್ಕೆ ಯಾರ ಅಭ್ಯಂತರ ಇದೆ. ಹಾಸನ ತಾಲ್ಲೂಕು ಏನಾದರೂ ಪಾಕಿಸ್ತಾನಕ್ಕೆ ಸೇರಿದೆಯೋ, ಚೈನಾ ದೇಶಕ್ಕೆ ಸೇರಿದೆಯೋ ಅಥವಾ ಬೇರೆ ಯಾವುದಾದರೂ ದೇಶಕ್ಕೆ ಸೇರಿದೆಯೋ? ಅಥವಾ ಇದಕ್ಕೆ ಹೇಳುವವರು, ಕೇಳುವವರು ಯಾರೂ ಇಲ್ಲವಾ?

ಉಪಾಧ್ಯಕ್ಷರು : ಕೇಳಿ.

ಶ್ರೀ ಕೆ.ಹೆಚ್. ಹನುಮೇಗೌಡ : ಹಾಗಾದರೆ ಯಾರೂ ಹೇಳುವವರು ಕೇಳುವವರು ಇಲ್ಲವೇ? ಹೀಗೆಯೇ ಕೇಳಬೇಕು. ಒಳ್ಳೆಯ ಮಾತಿನಲ್ಲಿ ಕೇಳಿದರೆ ಇದುವರೆಗೆ ಯಾಕೆ ಆಗಲಿಲ್ಲ, ಜನ ಹೊಟ್ಟೆಗೆ ಇಲ್ಲದೆ ಸಾಯುತ್ತಾ ಇರುವ ಟೈಮಿನಲ್ಲಿ ದೇಶದ ದುಡ್ಡನ್ನು ತಂದು ಅಧಿಕಾರ ಸಿಕ್ಕಿದೆ. ಎಂದು ಹೇಳಿಬಿಟ್ಟು ಇವರ ಮನಸ್ಸಿಗೆ ಬಂದ ಹಾಗೆ ಮಾಡಿಕೊಳ್ಳುವುದಾದರೆ ಜನ ಯಾಕೆ ನನಗೆ ಓಟು ಕೊಡಬೇಕು. ನಾನು ಯಾಕೆ ಎಂ ಎಲ್ ಎ ಆಗಿ ಇರಬೇಕು. ಮಂತ್ರಿತನ ಯಾಕೆ ಇರಬೇಕು. ಸರ್ಕಾರ ಯಾಕೆ ಇರಬೇಕು? ಹೀಗೆ ಅನ್ಯಾಯ ಆಗುತ್ತಿದೆ. ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ ಎನ್ನುವ ರೀತಿ. ಹೇಳುವವರು ಕೇಳುವವರೂ ಯಾರೂ ಇಲ್ಲವೇ? ಎಲ್ಲಿಯವರೆಗೆ ಜನ ಸಹಿಸುತ್ತಾರೆ ಈ ಅನ್ಯಾಯವನ್ನು. ಈ ಅನ್ಯಾಯಕ್ಕೂ ಒಂದು ಮಿತಿ ಇದೆ. ಇವರ ಹತ್ತಿರ ಸೈನ್ಯ ಇರಬಹುದು, ದುಡ್ಡು ಇರಬಹುದು, ಜನ ಎದ್ದು ನಿಂತರೆ ಇವರ ಹಣ, ಇವರ ಅಧಿಕಾರ ತೃಣವಾಗಿ ಹೋಗುತ್ತದೆ. ನಾನು ಬಹಳ ಸಂಕಟದಿಂದ ಈ ಮಾತನ್ನು ಹೇಳುತ್ತಿದ್ದೇನೆ.

ಉಪಾಧ್ಯಕ್ಷರು : ಮಂತ್ರಿಗಳು ಉತ್ತರ ಹೇಳುವುದಕ್ಕೆ ಬಿಡಿ.

ಶ್ರೀ ಕೆ.ಹೆಚ್. ಹನುಮೇಗೌಡ : ಯಾತಕ್ಕೆ ಈ ಅನ್ಯಾಯ? ನಾನು ಅದನ್ನೆಲ್ಲಾ ಕೇಳುತ್ತಾ ಇರುವುದು. ಟೋಪ್ಪೋ ಶೀಟನ್ನು ನಿಮಗೆ ಕಳಿಸಿಕೊಡುತ್ತೇನೆ. ಇದನ್ನು ತೆಗೆದುನೋಡಿ. ಇದರಲ್ಲಿ ನ್ಯಾಯ ಇದೆ ಎಂದರೆ ನೀವು ಒಪ್ಪಿಕೊಳ್ಳಿ. ಇಲ್ಲದಿದ್ದರೆ ನಾನು ರಾಜೀನಾಮೆ ಕೊಡುತ್ತೇನೆ. ಏನು ಈ ಅನ್ಯಾಯ? ಯಾರೋ ಒಬ್ಬರಿಗೆ ಅಧಿಕಾರ ಸಿಕ್ಕಿದರೆ, ಇವರ ಅಪ್ಪನ ಮನೆಯ ಆಸ್ತೀನಾ ಇವರು ಯಾಕೆ ಹೀಗೆ

ಮಾಡುತ್ತಿದ್ದಾರೆ? ಇವರ ರಾಜಕೀಯ, ಇವರ ಊರು, ಅವರ ಕೇರಿ, ಅವರ ಪಟ್ಟಣ ಇವೆಲ್ಲಾ ಏನು? ಇದು ಸರ್ಕಾರ ಮಾಡುವಂತಹ ವಿಧಾನಾನಾ?

ಉಪಾಧ್ಯಕ್ಷರು : ಕ್ಲಾರಿಫಿಕೇಶನ್ ಕೇಳಿ. ಮುಗಿಸಿ ಬಿಡಿ.

ಶ್ರೀ ಕೆ.ಹೆಚ್. ಹನುಮೇಗೌಡ : ನನ್ನದು ಇನ್ನೂ ಪೂರ್ತಿ ಮುಗಿದಿಲ್ಲ. ನಾನು ಕ್ಲಾರಿಫಿಕೇಶನ್ ಕೇಳುವುದಕ್ಕೆ ನಿಂತಿರುವುದು, ಕೇಳುತ್ತೇನೆ. ಇನ್ನು ಒಂದು ಗ್ರಹಚಾರ. ಜನ ಹೇಳುತ್ತಾರೆ ಚಳುವಳಿ ಮಾಡೋಣ ಎಂದು ಆದರೆ ಗ್ರಹಚಾರ ನಾನು ರೂಲಿಂಗ್ ಪಾರ್ಟಿಯವನು. ಏನು ಮಾಡುವುದು. ಇಲ್ಲಿ ಹೇಳಿದರೆ ಕಿವಿಗೆ ಮುಟ್ಟುವುದೇ ಇಲ್ಲ. ಅಲ್ಲಿ ಜನ ಚಳುವಳಿ ಮಾಡಿದರೆ ಮೊದಲೇ ಕಾಯುತ್ತಿದ್ದಾರೆ.

ಉಪಾಧ್ಯಕ್ಷರು : ಈಗ ಏನು ಹೇಳುತ್ತೀರಿ?

ಶ್ರೀ ಕೆ.ಹೆಚ್. ಹನುಮೇಗೌಡ : ಈಗ ನಾನು ಏನು ಮಾಡಬೇಕು ಹೇಳಿ? ವಾಟ್ ಐ ಹ್ಯಾವ್ ಟುಡು ಚಳುವಳಿ ಮಾಡಿದರೆ ಆಂಟಿ ಪಾರ್ಟಿ ಆಕ್ಟಿವಿಟೀಸ್ ಎಂದು ಹೇಳುತ್ತಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಿಜವಾದ ಕಷ್ಟವನ್ನು ಹೇಳುತ್ತಿದ್ದಾರೆ. ಬಹಳ ಚೆನ್ನಾಗಿ ಮಾತಾನಾಡುತ್ತಿದ್ದಾರೆ.

(ಗೊಂದಲ)

ಶ್ರೀ ಕೆ.ಹೆಚ್ ಹನುಮೇಗೌಡ: ಇಂತಹ ಹತ್ತು ಉದಾಹರಣೆಗಳು ಇವೆ. ಇವತ್ತು ಸ್ಯಾಂಪಲ್‌ಗೆ ಒಂದು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಸಿ. ಬೈರೇಗೌಡ : ನಮಗೆ ನೀರು ಇಲ್ಲ.

ಶ್ರೀ ಕೆ.ಹೆಚ್. ಹನುಮೇಗೌಡ : ನಿಮಗೆ ನೀರು ಇಲ್ಲ. ನಮಗೆ ಇದ್ದು ಗ್ರಹಚಾರ. ಈ ದ್ರೋಹಿಗಳ ಕಾಟ ತಡೆ ಹಿಡಿಯಬೇಕಾಗಿದೆಯಲ್ಲಾ ನಮ್ಮ ಹಾಸನ ತಾಲ್ಲೂಕಿನ ಜನ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಶಾಸಕರಾದ ಶ್ರೀ ಹನುಮೇಗೌಡರು ಬಹಳ ಹಿರಿಯ ಸದಸ್ಯರು. ಅವರು ಅವರ ಪ್ರದೇಶದ. ಅವರ ಕ್ಷೇತ್ರದ ಸಮಸ್ಯೆಯ ಬಗ್ಗೆ ಬಹಳ ಕಳಕಳಿಯಿಂದ ಮಾತನಾಡಿದ್ದಾರೆ. ಸ್ವಲ್ಪ ಧ್ವನಿ ಎತ್ತರಿಸಿ ಮಾತನಾಡಿದರು. ಆದರಲ್ಲಿ ತಪ್ಪು ಏನೂ ಇಲ್ಲ. ಆದರೆ ಸರ್ಕಾರದ ಮಟ್ಟಿಗೆ ಹೇಳುವುದಾದರೆ ಸರ್ಕಾರಕ್ಕೆ ಹಾಸನ ಜಿಲ್ಲೆ ಒಂದೇ ಹೊಳೆನರಸೀಪುರ ತಾಲ್ಲೂಕು ಸಹ ಒಂದೇ ಹೊಳೆನರಸೀಪುರ ಮೇಲೋ ಅಥವಾ ಹಾಸನ ಜಿಲ್ಲೆ ಮೇಲೋ ಎಂಬ ಸ್ಪರ್ಧೆ ಈಗ ಇಲ್ಲ. ಅವರು ಹೇಳುವುದು ಏನು ವಿಚಾರ ಇದೆ. ಅವರಿಗೆ ಈಗಾಗಲೇ ನಾನು ಹೇಳಿದ್ದೇನೆ. ನಮ್ಮ ಯೋಚನೆಯಲ್ಲಿ ಚೆನ್ನರಾಯಪಟ್ಟಣಕ್ಕೆ ಬೇರೆಯವರಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಎಲ್ಲಾ ಸರ್ಕಾರಗಳಲ್ಲಿಯೂ ಸಹ ಹೊಳೆನರಸೀಪುರ ತಾಲ್ಲೂಕಿಗೆ ಒಂದು ವಿಶೇಷವಾದ ಸ್ಥಾನ ಇದೆ. ಬೇಕಾದರೆ ಇತಿಹಾಸ ತೆಗೆದು ನೋಡಿ. ಅರಸು ಅವರ ಕಾಲದಲ್ಲಿ, ಗುಂಡೂರಾಯರ ಕಾಲದಲ್ಲಿ, ವೀರೇಂದ್ರ ಪಾಟೀಲರ ಕಾಲ, ನಮ್ಮ ಕಾಲ, ನಿಮ್ಮ ಕಾಲ. ಅದು ಎಲ್ಲ ಕಾಲದಲ್ಲಿಯೂ ಹಾಗೆ ಇದೆ.

ಉಪಾಧ್ಯಕ್ಷರು : ಮಾನ್ಯ ಸಿಂಧ್ಯಾರವರೂ ಅದನ್ನು ಒಪ್ಪಿಕೊಳ್ಳುತ್ತಾರೆ.

ಶ್ರೀ ಎಸ್.ಹೆಚ್. ಕೌಜಲಗಿ : ನೀರಾವರಿಯಲ್ಲಿ ಹಾಸನ, ಎಜುಕೇಶನ್‌ಗೆ ಬಂದರೆ ಕಾರ್ಕಳ...

ಶ್ರೀ ಹೆಚ್.ಎಂ ರೇವಣ್ಣ : ನ್ಯಾಷನಲ್ ಹೈವೇ ದುಡ್ಡೆಲ್ಲಾ ಹಾಸನಕ್ಕೆ ಹೋಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ನಾನು ಉತ್ತರ ಹೇಳಲಾ?

ಶ್ರೀ ಪಿ.ಜಿ.ಆರ್. ಸಿಂಧ್ಯ : ನೀವು ಯೀಲ್ಡ್ ಆಗಿದ್ದಕ್ಕೆ ಹೇಳಿದೆ, ಇಲ್ಲದಿದ್ದರೆ ಹೇಳುತ್ತಿರಲಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಇಟ್ ಈಸ್ ಆಲ್‌ರೈಟ್, ನಾನು ಅಬ್ಜೆಕ್ಷನ್ ತೆಗೆದುಕೊಂಡಿಲ್ಲ. ಈಗ ಹಾಸನ, ಹೊಳೆನರಸೀಪುರ ಜಗಳ ಏನಿದೆ ಇದು ಅವರವರೇ ಪರಿಹಾರ ಮಾಡಿಕೊಳ್ಳಬೇಕು. ಇದಕ್ಕೆ ಸರ್ಕಾರ ಪರಿಹಾರ ಮಾಡುವುದಕ್ಕೆ ಆಗುವುದಿಲ್ಲ....ಇಲ್ಲಿ...

ಶ್ರೀ ವಾಟಾಳ್ ನಾಗರಾಜ್ : ಹಾಸನ, ಹೊಳೆನರಸೀಪುರ ಜಗಳದಲ್ಲಿ ಸರ್ಕಾರಗಳು ಮುಗಿದು ಹೋಗುವಂತಹ ಕಾಲ ಬರುತ್ತದೆ. ಇದರ ಬಗ್ಗೆ ಎಲ್ಲರೂ ಎಚ್ಚರದಿಂದ ಇರಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಸರ್ಕಾರ ಉರುಳುತ್ತದೋ ಅಥವಾ ಇಲ್ಲವೋ ನೋಡೋಣ. ಈಗ ಪ್ರಶ್ನೆ ಅಂದರೆ ಸನ್ಮಾನ್ಯ ಶಾಸಕರಾದ ಶ್ರೀ ಹನುಮೇಗೌಡರು ಬಹಳ ಪ್ರಾಮುಖ್ಯವಾಗಿ ಹೆಚ್ಚಾಗಿ ಕ್ಷಾಮದ ದವಡೆಗೆ ಸತತವಾಗಿ ಈಡಾದಂತಹ ಹಾಸನ ತಾಲ್ಲೂಕಿನ ಭಾಗಕ್ಕೆ ಹೇಮಾವತಿ ನೀರು ಬೇಕು ಎಂದು ಅವರ ಬೇಡಿಕೆ. ಅದನ್ನು ಪರಿಹಾರ ಮಾಡುವುದಕ್ಕೆ ಇವತ್ತು ನಾವು ಕುಳಿತುಕೊಳ್ಳಬೇಕು. ಹೊಳೆನರಸೀಪುರ ತಾಲ್ಲೂಕಿಗೆ ಜಾಸ್ತಿ ನೀರು ಬಂತೋ ಅಥವಾ ಹಾಸನಕ್ಕೆ ನೀರು ಜಾಸ್ತಿ ಬಂತೋ ಯಾಕೆ ಈ ಯೋಜನೆ ಮಾಡಿದ್ದಾರೆ. ಇದರ ಸಿಂಹಾವಲೋಕನ, ಇತಿಹಾಸ ಸಂಶೋಧನೆ ಅದು ಪ್ರತ್ಯೇಕ. ಅದು ನೀರಾವರಿ, ವ್ಯಾಪ್ತಿಗೆ ಸ್ವಲ್ಪ ಮಿಕ್ಕಿದ ವಿಚಾರ ಅದನ್ನು ಈಗ ಮಾತನಾಡುವುದಕ್ಕೆ ಆಗುವುದಿಲ್ಲ. ಈಗ ನೀರಾವರಿಯ ವ್ಯಾಪ್ತಿಗೆ ಸೀಮಿತವಾಗಿ ನಾವು ಇವತ್ತು ಮಾತನಾಡುವುದಾದರೆ ಈಗಾಗಲೇ ನಾನು ಹೇಳಿದ್ದೇನೆ. ಹೇಮಾವತಿ ಜಲಾಶಯದಲ್ಲಿ ಈಗ ಅಚ್ಚುಕಟ್ಟು ಯೋಜನೆಗೆ ಒಳಪಡಿಸಿದ್ದಾರೆ. ಇದರಲ್ಲಿ ಸುಮಾರು 2,842 ಎಕರೆಗೆ ನೀರಾವರಿ ಸೌಲಭ್ಯ ಒದಗುತ್ತದೆ. ಇದು ಯೋಜನೇತರ ವ್ಯವಸ್ಥೆಯಲ್ಲಿರುವುದು.

ಈ ಯೋಜನೆಗೆ ಯಾರು ಕಾರಣಕರ್ತರು ಏಕೆ ಮಾಡಿದ್ದೀರಿ, ಇದರಿಂದ ಅನ್ಯಾಯವಾಗಿದೆ ಎಂಬ ಪ್ರಶ್ನೆಯನ್ನು ಮಾನ್ಯರು ಎತ್ತುತ್ತಾ ಇದ್ದಾರೆ. ಈಗಿರುವಂಥ ಯೋಜನೆಯಲ್ಲಿ ನೀರು ಹರಿದುಹೋಗುವುದಕ್ಕೆ ಕಾಂಟ್ಯೂರ್ ಪ್ರಕಾರ ಆಗುತ್ತದೆ. ಎಂಬ ಮಾತನ್ನು ಹೇಳುತ್ತಾ ಇದ್ದಾರೆ. ಅಲ್ಲಿ ಒಂದು ಕಾಮಸಮುದ್ರ ಎಂಬ ಏತ ನೀರಾವರಿಯನ್ನು ಕೂಡ ಎತ್ತಿಕೊಂಡಿದ್ದಾರೆ. ಅದರ ಪ್ರಕಾರ ನಮಗೆ ನೀರು, ಹಾಸನ ತಾಲ್ಲೂಕು ಕೂಡ ಕ್ಷಾಮಪೀಡಿತ ಪ್ರದೇಶವಾದ ಕಾರಣ ನಮಗೂ ಕೂಡ ಆದ್ದರಿಂದ ನೀರು ಬರಲಿಕ್ಕೆ ಸಾಧ್ಯವಾಗುತ್ತದೆ. ಎಂದು ಹೇಳುತ್ತಿದ್ದಾರೆ. ಈ ಯೋಜನೆಯ ಇತಿಮಿತಿಗೆ ಒಳಗೊಂಡು ಆ ನೀರು ಹಾಸನ ತಾಲ್ಲೂಕು ವಿಭಾಗಕ್ಕೆ ಹೋಗುವುದಕ್ಕೆ ಸಾಧ್ಯ ಇದ್ದರೆ ಅದರ ಇನ್‌ವೆಸ್ಟಿಗೇಶನ್‌ನನ್ನು ಸರಕಾರದವರು ಮಾಡುತ್ತಾರೆ. ಆದರೆ ನಮಗೆ ಬಹಳ ಅನ್ಯಾಯವಾಗಿದೆ ಎಂಬ ಹತಾಶ ಮನೋಭಾವನೆ ಮಾತ್ರ ತಮಗೆ ಬೇಡ. ನಾವುಗಳು ಆಶಾಭಾವನೆಯಿಂದ ಹೋಗೋಣ. ಮಾನ್ಯ ಸದಸ್ಯರು ಈಗ ಒಂದು ಷ್ಟ್ರತಕ್ಕೆ ಬರುದಂತೆ ಕಾಣುತ್ತದೆ. ಈ ಕಾಂಟ್ಯೂರ್‌ನ್ನು ಹೇಗೆ ತಿರುಗಿಸಿಬಿಟ್ಟಿದ್ದಾರೋ ಹಾಗೆಯೇ ಅವರ ಮನಸ್ಸನ್ನು ಕೂಡ ತಿರುಗಿಸಿ ಬಿಡುವುದು ಬೇಡ ತಮ್ಮ ಮನಸ್ಸು

ದೊಡ್ಡದು ಇದ್ದರೆ ದೊಡ್ಡ ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯ ಆಗುತ್ತದೆ. ಇಲ್ಲವಾದರೆ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಅವರು ಇದ್ದ ಪರಿಸ್ಥಿತಿಯನ್ನು ಸತ್ಯ ಮತ್ತು ಪ್ರಾಮಾಣಿಕತೆಯಿಂದ ಹೇಳುತ್ತಾ ಇದ್ದಾರೆ. ಅವರು ಆ ಕ್ಷೇತ್ರದಿಂದ ನಾಲ್ಕಾರು ಸಲ ಆಯ್ಕೆಯಾಗಿ ಬಂದಿದ್ದಾರೆ. ಪಾಪ ಅವರ ಹಣೆಬರಹ...

ಶ್ರೀ ಎಂ. ವೀರಪ್ಪಮೊಯಿಲಿ : ಇಲ್ಲಿ ಹೊಳಿನರಸೀಪುರ, ಹಾಸನ ಎಂದು ಅವರಿಗೆ ಹೆಚ್ಚು ಇವರಿಗೆ ಕಡಿಮೆ ಎಂದು ಹೇಳುವ ಬದಲಾಗಿ ಸೂಕ್ತ ಯೋಚನೆಯನ್ನು ಮಾಡುವುದು ಒಳ್ಳೆಯದು ಈಗ ಯಗಚಿ ಯೋಜನೆಯಡಿಯಲ್ಲಿ 36, 180 ಎಕರೆ ಜಾಗ ಈ ಆಯಕಟ್ಟಿಗೆ ಬರುವುದಕ್ಕೆ ಸಾಧ್ಯವಿದೆ ಎಂದು ಹೇಳಿದ್ದೇವೆ. ಆ ಯೋಜನೆಯು ಆಗಿದೆ, ಅಪ್ರೂವ್ ಆಗಿದೆ, ಅದರ ಪ್ರಕಾರ ಡ್ಯಾಮ್ ಕೆಲಸವೂ ಕೂಡ ಆಗುತ್ತಿದೆ. ಆದರೆ ಇಲ್ಲಿ ನೀರು ಬರುವುದಿಲ್ಲ. ಎಂದು ತಾವು ಹೇಳಿತ್ತಾ ಇದ್ದೀರಿ, ಅದು ಸರಿಯಲ್ಲ. ನೀರು ಬರುತ್ತದೆ. ಅದಕ್ಕೆ ಶಾಸ್ತ್ರೀಯವಾದಂಥ ಅಧ್ಯಯನ ಮಾಡಿ ಅದರ ಪ್ರಕಾರವೇ ಯೋಜನೆಯನ್ನು ಮಾಡಿದ್ದೇವೆ. ಆದುದರಿಂದ ತಮಗೆ ಹತಾಶ ಭಾವನೆಯು ಬೇಡ. ಈಗ ತಾವೇ ಹೇಳಿದ್ದೀರಿ, ಹೇಮಾವತಿ ಜಲಾಶಯದಿಂದ ನಮಗೆ ನೀರು ಬರುವುದಕ್ಕೆ ಸಾಧ್ಯವಿದೆ ಎಂದು. ಆದ್ದರಿಂದ ಇದರ ಬಗ್ಗೆಯೂ ಹತಾಶ ಭಾವನೆ ಬೇಡ. ಇದರ ಬಗ್ಗೆ ಸರಕಾರದವರು ಇನ್ವೆಸ್ಟಿಗೇಶನ್ ಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬಹುದಾಗಿದೆ. ಈಗಿರತಕ್ಕಂಥ ಯೋಜನೆಯಲ್ಲಿ ಅದು ಇಲ್ಲದಿದ್ದರೂ ಕೂಡ ಮುಂದೆ ಏನನ್ನೂ ಸೇರಿಸಬಾರದು ಎಂದಿಲ್ಲ. ಅನೇಕ ಬಾರಿ ಒಂದು ಯೋಜನೆಯಲ್ಲಿ ಕೆಲವು ಭಾಗಗಳು ಸೇರಿಲ್ಲ ಎಂದು ಕಂಡು ಬಂದರೆ ಮುಂದೆ ರೀಇನ್ವೆಸ್ಟಿಗೇಶನ್ ಮಾಡಿ ಬಿಟ್ಟು ಹೋದ ಭಾಗಗಳನ್ನು ಸಹ ಸೇರಿಸಿದಂಥ ಪ್ರಸಂಗಗಳು ಇವೆ. ಆದುದರಿಂದ ಮಾನ್ಯ ಸದಸ್ಯರು ಒಂದು ತಾಲ್ಲೂಕಿನ ಸಂಘರ್ಷಣೆಯಲ್ಲಿ ತಮ್ಮ ಯೋಜನೆಯನ್ನು ಮುಳುಗಿಸುವ ಬದಲು ಒಂದು ವಿಶಾಲ ದೃಷ್ಟಿಯಿಂದ ತಮ್ಮ ಜಾಗಕ್ಕೂ ಏಕೆ ನೀರು ಬರಬಾರದು ಎಂಬ ದೃಷ್ಟಿಯಲ್ಲಿ ಒಂದು ಸದ್ಭಾವನೆಯನ್ನು ಹೊಂದಿ ಆ ಬಗ್ಗೆ ಕಾರ್ಯ ನಡೆಸಬೇಕು.

ಶ್ರೀ ವಾಟಾಳ್ ನಾಗರಾಜ್ : ತಾವು ಎಷ್ಟು ಸಮಾಧಾನ ಮಾಡಿದರೂ ಕೂಡ ಮಾನ್ಯ ಹನುಮೇಗೌಡರಿಗೆ ಸಮಾಧಾನವಾಗುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳನ್ನು, ತಮ್ಮನ್ನು ಮತ್ತು ಇಂಜಿನಿಯರ್‌ಗಳನ್ನು ಕರೆಸಿ ಮಾನ್ಯ ಮುಖ್ಯಮಂತ್ರಿ ಅವರ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ಕರೆದು ಆ ಬಗ್ಗೆ ಪೂರ್ತಿಯಾಗಿ ಒಂದು ಸಮಾಲೋಚನೆ ಮಾಡಿ ಯಾವ ರೀತಿಯಲ್ಲಿ ಮಾಡಿದರೆ ಎಲ್ಲರಿಗೂ ಅನುಕೂಲವಾಗುತ್ತದೆ ಎಂಬುದನ್ನು ನೋಡುತ್ತೇವೆ. ಯಾವುದೇ ಯೋಜನೆಯನ್ನು ಮಾಡಬೇಕಾದರೂ ಸರಕಾರದವರು ಎಲ್ಲರ ಹಿತದೃಷ್ಟಿಯನ್ನು ಇಟ್ಟುಕೊಂಡೇ ಮಾಡಬೇಕಾಗುತ್ತದೆ. ಎಲ್ಲರಿಗೂ ನ್ಯಾಯ ದೊರಕಿಸಿಕೊಡಬೇಕೆಂದು ಸರಕಾರದ ಉದ್ದೇಶವಾಗಿದೆ.

ಶ್ರೀ ಸಿ. ಬೈರೇಗೌಡ: ಮಾನ್ಯ ಹನುಮೇಗೌಡರನ್ನು ಮಂತ್ರಿಮಂಡಲದಲ್ಲಿ ಸೇರಿಸಿಕೊಳ್ಳತಕ್ಕಂಥ ಕೆಲಸವನ್ನು ಮಾಡಿ. ಅವರ ಬಗ್ಗೆ ಬಹಳ ಒಮ್ಮತ ಕೂಡ ಇದೆ....

(ಗೊಂದಲ)

ಶ್ರೀ ಕೆ.ಹೆಚ್. ಹನುಮೇಗೌಡ : ಮಾನ್ಯ ಸದಸ್ಯರುಗಳ ಸಪೋರ್ಟ್ ನನಗೆ ಈಗ ಬೇಡ. ಹೇಮಾವತಿ ಯೋಜನೆಯಿಂದ ಎರಡೂವರೆ ಸಾವಿರ ಎಕರೆ ನೀರಾವರಿ ಆಗುತ್ತದೆಂದು ಮಾನ್ಯ ಸಚಿವರು ಹೇಳಿದರು. ನಮ್ಮ ಕ್ಷೇತ್ರದಲ್ಲಿ ಬಹಳ ಸೊಗಸಾದ ಮಳೆಯಾಯಿತು. ತರಿ ಜಮೀನುಗಳೆಲ್ಲಾ ಮುಳುಗಿ ಹೋಯಿತು. 5-6 ಸಾವಿರ ಎಕರೆ

ಮುಳುಗಿ ಹೋಯಿತು. ಆದರೆ ನೀರಾವರಿ ಆದ ಪ್ರದೇಶ ಎರಡೂವರೆ ಸಾವಿರ ಎಕರೆ ಪ್ರದೇಶ ಮಾತ್ರ. ನಾವು ಕಳೆದುಕೊಂಡಿದ್ದು ಎಷ್ಟು ಮತ್ತು ನೀವು ಕೊಡುವುದು ಎಷ್ಟು ಎಂದು ಇದರಿಂದಲೇ ತಿಳಿಯುತ್ತದೆ. ಈ ರೀತಿಯಲ್ಲಿ ನಮಗೆ ತಾವುಗಳು ಸಮಾಧಾನ ಮಾಡುತ್ತಿದ್ದೀರಿ. ಉದಾಹರಣೆಗೆ ಹೇಳುವುದಾದರೆ ಯಗಚಿಯ ನೀರನ್ನು ಬೇಲೂರಿನವರು ಬಿಟ್ಟಾಗ ನೋಡಿಕೊಳ್ಳೋಣ. ಆದರೆ ಈ ಕಾರ್ಯಗತವಾಗತಕ್ಕಂಥ ಕಾಮಸಮುದ್ರ ಏತನೀರಾವರಿ ಯೋಜನೆ ಏನು ಇದೆ. 14 ಕಿ.ಮೀ. ಹೋದ ಮೇಲೆ ಕಾಂಟೂರ್ ಕಂಟಿನ್ಯೂ ಆಗುತ್ತದೆ. ಹಾಸನ ತಾಲ್ಲೂಕಿಗೆ ಬರುತ್ತದೆ ಎಂದು ಹೇಳಿ ಅಲ್ಲಿಗೇ ತಕ್ಷಣ ನಿಲ್ಲಿಸಿ ಈ ನೀರನ್ನು ಪುನಃ ಇನ್ನೊಂದು ಲಿಫ್ಟ್‌ಹಾಕಿ ಅದನ್ನು ಹೊಳೆನರಸೀಪುರ ತಾಲ್ಲೂಕಿಗೆ 69 ಕಿ.ಮೀ. ಉದ್ದಕ್ಕೆ ತೆಗೆದುಕೊಂಡು ಹೋಗಿ, 3 ಸಾವಿರ ಎಕರೆ ಪ್ರದೇಶವನ್ನು ಇರಿಗೇಟಿಡ್ ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದೀರಲ್ಲ? ಇನ್ನೂ 8-10 ಕಿ.ಮಿ ಹಾಸನ ತಾಲ್ಲೂಕಿನಲ್ಲಿ ಕಾಂಟ್ಯೂರ್ ಕಂಟಿನ್ಯೂ ಮಾಡಿದ್ದರೆ ಅಲ್ಲಿಯ ಸುಮಾರು 5-6 ಸಾವಿರ ಎಕರೆ ಭೂಮಿಗೆ ನೀರು ಒದಗುತ್ತಾ ಇತ್ತು. ಇಷ್ಟೆಲ್ಲಾ ಅನುಕೂಲತೆಗಳು ಇರುವಾಗ ನಮ್ಮ ಹಾಸನ ತಾಲ್ಲೂಕಿಗೆ ಏಕೆ ಈ ಒಂದು ವ್ಯವಸ್ಥೆಯನ್ನು ಕೊಡಲು ಹಿಂದು ಮುಂದು ನೋಡುತ್ತೀರಿ? ಈ ಬಗ್ಗೆ ಮಾನ್ಯ ಸಚಿವರಿಂದ ಒಂದು ಮಾತನ್ನು ಭರವಸೆಯ ಮೂಲಕ ಕೇಳ ಬಯಸುತ್ತೇನೆ.

ಏನೆಂದರೆ ಕಾಂಟೂರು ಕಂಟಿನ್ಯೂ ಆಗಿ ಎಲ್ಲಿಯವರೆಗೆ ನೀರು ಹೋಗುತ್ತೋ ಅಲ್ಲಿವರೆಗೂ ಸರ್ವೆಯಾಗಿ ಈ ಯೋಜನೆಯಿಂದ ನೀರು ಕೊಡಲು ಸರ್ಕಾರ ಒಪ್ಪಿದೆಯೇ? ಮಾಡಿಕೊಡುತ್ತೇವೆ. ಎಂದರೆ ನನಗೆ ಸಮಾಧಾನ. ಆದರೆ, ಸರ್ವೆ ಮಾಡಿಸ್ತೀವಿ. ನೋಡ್ತೀವಿ ಇನ್ನೊಂದು ಸಲ ಯೋಚನೆ ಮಾಡುತ್ತೇವೆ. ಇನ್ನೊಂದು ಸಲ ಹುಟ್ಟಿ ಬಾ - ಇದೆಲ್ಲ ಹೇಳುವುದು ಬೇಡ. ನನಗೆ ಈಗ ನಡೀತಿರುವುದು ಬೇಕು. ಇಲ್ಲಾಂದ್ರೆ ನಾನು ಚಳುವಳಿ ಹೂಡ್ತೀನಿ. ಅದಕ್ಕೆ ಬೇಕಾದರೆ ತಗೊಂಡು ಹೋಗಿ ನನ್ನ ಜೈಲಿಗೆ ಹಾಕಲಿ.

ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಹನುಮೇಗೌಡರು ಇನ್ನೊಮ್ಮೆ ಹೊಳೆನರಸೀಪುರದಲ್ಲಿ ಹುಟ್ಟಿ ಬರಬೇಕೆಂದು ನಾನೇನು ಹೇಳಲಿಲ್ಲ. ಹಾಸನದಲ್ಲೇ ಅವರು ಹುಟ್ಟಿ ಬರಲಿ. ಹಾಸನದ ಭೂಮಿ ಪಾವನವಾಗಬೇಕು. ಏಕೆಂದರೆ ಅವರಂಥಾ ಒಬ್ಬ ಶ್ರದ್ಧಾವಂತ ಪ್ರಾಮಾಣಿಕ ಕಾರ್ಯಕರ್ತ ಹಾಸನದಲ್ಲಿದ್ದರೇನೇ ಹಾಸನ ಉದ್ಧಾರವಾಗುವುದು. ಆದ್ದರಿಂದ ಈಗ ಬರೀ ಆಶ್ವಾಸನೆ ಪ್ರಶ್ನೆ ಇಲ್ಲ. ನಾನು ಈಗ ಕಾಂಟೂರು ಇಲ್ಲ. ಅದನ್ನು ವಿಸ್ತರಿಸಿ ನೀರು ಕೊಡ್ತೇವೆ ಎಂದು ನೇರವಾಗಿ ಹೇಳುವುದು ಅಂದರೆ ಏಕೆಂದರೆ ಒಂದು ಆಯಕಟ್ಟು ಪ್ಲಾನ್ ಆಗಿರುತ್ತದೆ. ಹಿಂದೆ ಕೂಡ ಈ ವಿಚಾರವನ್ನು ನೀವು ಪ್ರಸ್ತಾಪ ಮಾಡಿದ್ದಿರಿ, ಮುಖ್ಯಮಂತ್ರಿಗಳ ಹತ್ತಿರ ಕೂಡ ಪ್ರಸ್ತಾಪ ಮಾಡಿದ್ದೀರಿ, ಅವರು ಕೂಡ ಹೇಳಿದ್ದಾರೆ. ಇದನ್ನು ನಾವು ಇನ್‌ವೆಸ್ಟಿಗೇಷನ್ ಮಾಡಿಸ್ತೀನಿ, ತಮ್ಮನ್ನು ಕರೆಸಿ ಇದರ ಸಾಧ್ಯಾಸಾಧ್ಯತೆ ಬಗ್ಗೆ ಮಾತಾಡ್ತೇವೆ ಎಂದು ಹೇಳಿದ್ದಲ್ಲದೆ. ಬರೀ ಸರ್ವೆ ಮಾಡ್ತೇವೆ ಆ ಸರ್ವೆ ತಮ್ಮ ಕಣ್ಣಿಗೆ ಮಣ್ಣೆರಚುವುದಕ್ಕೆ ಮಾಡುವ ಸರ್ವೆಯಲ್ಲ. ಕಾಮಸಮುದ್ರ ಏತನೀರಾವರಿ ಯೋಜನೆಯಾಗಿದೆ. ಕಾಂಟೂರು ಕೂಡ ಈಗ ಒಂದು ಯೋಜನೆಯಾಗಿದೆ. ಆದರೆ ತಮ್ಮ ವಾದ ಎಂದರೆ ಈ ನೀರನ್ನು ತಮ್ಮ ಹಾಸನ ತಾಲ್ಲೂಕಿಗೆ ತರಲಿಕ್ಕೆ ಸಾಧ್ಯವಿದೆ. ಎಂಬುದು. ನಾನು ಅದನ್ನೇ ಹೇಳುತ್ತಿದ್ದೇನೆ. ನಮ್ಮ ಭರವಸೆ ಎಂದರೆ ನಾವು ಇದನ್ನು ವಿಚಾರಣೆ ಮಾಡಿಸುತ್ತೇವೆ. ಹೇಮಾವತಿಯಂಥ ದೊಡ್ಡ ಜಲಾಶಯದಿಂದ ಇನ್ನು ಎರಡು ಮೂರು ಸಾವಿರ ಎಕರೆ ಹಾಸನ ತಾಲ್ಲೂಕಿಗೆ ನೀರಾವರಿಯಾಗುವುದಿದ್ದರೆ We will investingate in to that matter ಈ ಆಯಕಟ್ಟಿಗೆ ಇಷ್ಟು ನೀರು ಎಂದು ನಿಗದಿ ಆಗಿದೆ. ಮಾನ್ಯ ದೇವೇಗೌಡರು ಹಿಂದೆ ನೀರಾವರಿ ಸಚಿವರಾಗಿದ್ದಾಗ ನೂರು ವರ್ಷದಿಂದ ಏನು ಅಸೆಸ್‌ಮೆಂಟ್ ಮಾಡಿದ್ದರೋ

ಅದಕ್ಕಿಂತ ನೀರಿನ ಪ್ರಮಾಣ ಜಾಸ್ತಿಯಾಗಿದೆ. ಆ ನದಿಯಲ್ಲಿ ನೀರಿದ್ದರೆ ಅದನ್ನು ತಮ್ಮ ಹಾಸನ ತಾಲ್ಲೂಕಿಗೆ ಕೊಂಡೊಯ್ಯಲು ನಮ್ಮದೇನೂ ಅಡ್ಡಿಯಿಲ್ಲ. ಅದಕ್ಕೇ ನಾನು ಹೇಳಿದ್ದು. ಹಾಸನದಿಂದ ಎಲ್ಲ ಅಪಹರಿಸಿಕೊಂಡು ಎಲ್ಲವನ್ನು ಹೊಳೀನರಸೀಪುರಕ್ಕೆ ಒಯ್ಯಬೇಕೆಂಬ ಇರಾದೆ ನಮಗಿಲ್ಲ. ಹೊಳೆನರಸೀಪುರ ರೈತರು ಹಾಸನ ರೈತರೆಲ್ಲ ಒಂದೇ, ಭೇದ ಇಲ್ಲ. ತಾವು ಹೇಳುವುದು ಇಲ್ಲ ಅವರಿಗೆ ಜಾಸ್ತಿ ನೀರು ಹೋಗ್ತಾ ಇದೆ. ನಮಗೆ ನೀರು ಜಾಸ್ತಿ ಬರ್ತಾ ಇಲ್ಲ ಅನ್ನೋ ಪ್ರಶ್ನೆಯಲ್ಲ. ಇಲ್ಲಿ ಹಾಸನ ತಾಲ್ಲೂಕಿಗೆ ಇನ್ನೂ ಹೆಚ್ಚಿನ ಭೂಮಿಗೆ ನೀರು ಕೊಡುವ ಅವಕಾಶ ಇದ್ದರೆ ಅದರ ಬಗ್ಗೆ ಸರ್ಕಾರ ಪ್ರಾಮಾಣಿಕವಾದಂಥ ಪ್ರಯತ್ನ ಮಾಡುತ್ತದೆ. ಅದರ ಇನ್‌ವೆಸ್ಟಿಗೇಷನ್ ಆಗುತ್ತದೆ. ಅದಕ್ಕಾಗೇ ತಮ್ಮನ್ನು ಕರೆಸಿ ಮಾತನಾಡುತ್ತೇವೆ. ಅದು ಆಗುವುದಿಲ್ಲ ಎಂದು ನಾವು ಹೇಳಿದ ಮೇಲೆ ತಾವು ಬೇಕಾದರೆ ಚಳುವಳಿಯೋ ಅಥವಾ ಬೇರೆ ದಾರಿ ಹುಡುಕುವ ಆಲೋಚನೆ ಮಾಡಿ, ಅದು ಆಗುವುದಿಲ್ಲವೆಂದು ಹೇಳುವವರೆಗೂ ಸರ್ಕಾರದ ಪ್ರಾಮಾಣಿಕತೆಯ ಬಗ್ಗೆ ತಾವು ನಂಬಿಕೆ ಇಡಬೇಕೆಂದು ತಮ್ಮಲ್ಲಿ ನಾನು ಪ್ರಾರ್ಥಿಸಿಕೊಳ್ಳುತ್ತೇನೆ.

3. ಹುಬ್ಬಳ್ಳಿ ಮಹಾದೇವ ಬಟ್ಟೆ ಗಿರಣಿಯನ್ನು ಪುನಶ್ಚೇತನಗೊಳಿಸುವುದು.

ಶ್ರೀ ಗೋಪಿನಾಥ್ ಆರ್. ಸಾಂಡ್ರಾ ಹುಬ್ಬಳ್ಳಿ ಉಪಾಧ್ಯಕ್ಷಣಿಯವರೇ, ಹುಬ್ಬಳ್ಳಿಯ ಮಹಾದೇವ ಟೆಕ್ಸ್‌ಟೈಲ್ ಮಿಲ್ಸ್‌ನ್ನು ಪುನಶ್ಚೇತನಗೊಳಿಸುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಉಪಾಧ್ಯಕ್ಷಿಣಿಯವರೇ, ಮುಖ್ಯಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಮಾಡಲು ತಮ್ಮ ಅನುಮತಿಯನ್ನು ಬೇಡುತ್ತಿದ್ದೇನೆ.

ಮಹದೇವ ಟೆಕ್ಸ್‌ಟೈಲ್ ಮಿಲ್ ಒಂದು ಸಂಯುಕ್ತ ಹತ್ತಿ ಗಿರಣಿಯಾಗಿ 1898ರಲ್ಲಿ ಸ್ಥಾಪನೆಯಾಯಿತು. ಇದರ ಆಡಳಿತ ಕಾಲಕಾಲಕ್ಕೆ ಬೇರೆ ಬೇರೆಯವರ ಅಧೀನಕ್ಕೆ ಒಳಪಟ್ಟಿತ್ತು. ಅಂತಿಮವಾಗಿ ಕೇಂದ್ರಸರ್ಕಾರವು ಸದರಿ ಮಿಲ್ಲಿನ ವಹಿವಾಟನ್ನು ರಾಜ್ಯ ಸರ್ಕಾರಕ್ಕೆ ಇಂಡಸ್ಟ್ರೀಸ್ (ಡೆವೆಲಪ್‌ಮೆಂಟ್ ಅಂಡ್ ರೆಗ್ಯುಲೇಷನ್) ಆಕ್ಟ್ 1951 ಇದರಡಿ ವಹಿಸಿತು. ಇದರ ಆಡಳಿತ ವಹಿವಾಟನ್ನು ಏಪ್ರಿಲ್ 1979ರಲ್ಲಿ ವಹಿಸಿಕೊಂಡ ನಂತರ ರಾಜ್ಯ ಸರ್ಕಾರವು 1986ರಲ್ಲಿ ಒಂದು ಸುಗ್ರೀವಾಜ್ಞೆ ಹೊರಡಿಸಿ ಇದರ ಆಸ್ತಿ ಮತ್ತು ಹೊಣೆಗಾರಿಕೆಯನ್ನು ವಹಿಸಿ ಕೊಂಡಿತು. 1979ರಿಂದ ರಾಜ್ಯ ಸರ್ಕಾರವು ಒಟ್ಟು ರೂ. 135 ಲಕ್ಷ ಹಣವನ್ನು ಸದರಿ ಮಿಲ್ಲಿಗೆ ಸಹಾಯ ಧನವಾಗಿ ನೀಡಿದೆ. ನಂತರ 1988ರ ಡಿಸೆಂಬರ್ ಮಾಹೆಯಲ್ಲಿ ಸದರಿ ಮಿಲ್ಲಿನ ಆಡಳಿತವನ್ನು ಕಂಪನಿ ಲಾ ಆಕ್ಟ್ ಅಡಿಯಲ್ಲಿ ನೋಂದಾಯಿಸಲ್ಪಟ್ಟ ಕರ್ನಾಟಕ ಸ್ಟೇಟ್ ಟೆಕ್ಸ್‌ಟೈಲ್ಸ್ ಲಿಮಿಟೆಡ್‌ಗೆ ವರ್ಗಾಯಿಸಲಾಯಿತು. ಸದರಿ ನಿಯಮದ ಅಡಿ ಹಿಂದಿನ ಬಾಕಿಗಳನ್ನು ಪಾವತಿ ಮಾಡಲು ಒಬ್ಬ ಕಮೀಷನರ್ ಫಾರ್ ಪೇಮೆಂಟ್ಸ್ ಅವರನ್ನು ನೇಮಕ ಮಾಡಲಾಯಿತು. ಸದರಿಯವರಿಗೆ ಅಗತ್ಯವಾದ ಹಣವನ್ನು ಬಿಡುಗಡೆ ಮಾಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ. ಹಿಂದಿನ ಹೊಣೆಗಾರಿಕೆಯನ್ನು ಪಾವತಿ ಮಾಡದೆ ಮಿಲ್ಲಿನ ಆಸ್ತಿಗಳ ಮಾಲಿಕತ್ವ ಸರ್ಕಾರಕ್ಕೆ ಬರುವುದಿಲ್ಲ.

ಸದರಿ ಮಿಲ್ಲಿನ ಯಂತ್ರಗಳು ತುಂಬಾ ಹಳೆಯದಾಗಿರುವುದರಿಂದ ಮಿಲ್ಲನ್ನು ಸುಸ್ಥಿತ ಆರ್ಥಿಕ ತಳಹದಿಯ ಮೇಲೆ ನಡೆಸಿಕೊಂಡು ಹೋಗುವುದು ಸಾಧ್ಯವಾಗುವುದಿಲ್ಲ. ಈ ಮಿಲ್ಲಿನ ಪರಿಸ್ಥಿತಿಯನ್ನು ಟೆಕ್ಸ್‌ಟೈಲ್ ಬಗ್ಗೆ ಪರಿಣತಿ ಹೊಂದಿದ ಸಿಟ್ರಾ ಸಂಸ್ಥೆಯವರು (ಸೌತ್ ಇಂಡಿಯನ್ ಟೆಕ್ಸ್‌ಟೈಲ್ ರೀಸರ್ಚ್ ಅಸೋಸಿಯೇಟ್ಸ್) ಪರಿಶೀಲಿಸಿ, ಮಿಲ್ ಈಗಿರುವ ಪರಿಸ್ಥಿತಿಯಲ್ಲಿ ನಡೆಸಲು ಸಾಧ್ಯವಿಲ್ಲವೆಂದೂ ಅದನ್ನು ಮುಚ್ಚಬೇಕೆಂದು ಶಿಫಾರಸ್ಸು ಮಾಡಿದೆ. ಆದಾಗ್ಯೂ, ಸರ್ಕಾರವು ಅಲ್ಲಿನ ಕಾರ್ಮಿಕರ ಹಿತದೃಷ್ಟಿಯಿಂದ